ಶ್ರೀ ಹೆಚ್.ಜಿ. ಚೆನ್ನಪ್ಪ.—ಅಧ್ಯಕ್ಷರೇ,1972-73 ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದರ ಸುತ್ತ ಮುತ್ತ ಕಟ್ಟಡ ಕಟ್ಟಬಾರದು ಎನ್ನುವ ಕಾನೂನು ಮಾಡಿ, ಅದನ್ನು ರಿಸರ್ವ್ ಮಾಡಿದ್ದರೂ ಸಹ ಅಲ್ಲಿ ಕಟ್ಟಲಿಕ್ಕೆ ಯಾವ ಆಧಾರದ ಮೇಲೆ ಅನುಮತಿ ಕೊಟ್ಟಿದ್ದಾರೆ.ಈಗಲೂ ಅದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಿ ಅಲ್ಲಿ ಆಗಿರತಕ್ಕ ಕಟ್ಟಡಗಳಿಗೆ ಕಾಂಪನ್‌ಸೇಷನ್ ಕೊಟ್ಟು ಖಿಲ್ಲಾ ಮಾಡಿಸಿ ನಗರದ ವೈಭವವನ್ನ ಉಳಿಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).— ಅಧ್ಯಕ್ಷರೆ, ರಮಣ ಮಹರ್ಷಿ ಆಧ್ಯಯನ ಕೇಂದ್ರಕ್ಕೆ ತಾ. 30-9-1981ರ ಸರ್ಕಾರದ ಆದೇಶದ ಮೇರೆಗೆ ಪ್ರಾಧಿಕಾರದವರು ಒಂದು ನಿವೇಶನ ಮಂಜೂರು ಮಾಡಿದ್ದಾರೆ. ಸರ್ಕಾರದಿಂದ 250 ಅಡಿ, × 250 ಅಡಿ ಕೊಡಿ ಎಂದು ಹೇಳಿದ್ದಕ್ಕೆ ಪ್ರಾಧಿಕಾರದವರು 120 ಅಡಿ × 185 ಅಡಿ ವಿಸ್ತೀರ್ಣದ ಜಮೀನನ್ನು ಕೊಟ್ಟಿದ್ದಾರೆ. 15-10-81ರಲ್ಲಿ ಆ ಸ್ಥಳದಲ್ಲಿ ಒಂದು ಪ್ರಾರ್ಥನಾ ಮಂದಿರ ಕಟ್ಟುವ ಹಾಗೆ ನಕ್ಷೆ ಕೊಟ್ಟರು, ಅದು ಮಂಜೂರು ಆಯಿತು. ಅಲ್ಲಿ ಪ್ರಾರ್ಥನಾ ಮಂದಿರ ಬಂದಿದೆ. 16-7-1982ರಲ್ಲಿ ಮತ್ತೊಂದು ಅರ್ಜಿಯನ್ನು ಕೊಟ್ಟು ಮತ್ತೆ ಸ್ಥಳ ಬೇಕು ಎಂದು ಕೇಳಿದಾಗ ಸರ್ಕಾರದ ಆದೇಶ ನೀಡಿದ ಮೇರೆಗೆ 62,410 ಚದುರ ಅಡಿಯಷ್ಟು ಜಮೀನು ಪ್ರಾಧಿಕಾರ 20-10-82ರಲ್ಲಿ ಕೊಟ್ಟಿದೆ. ಹೊಸದಾಗಿ ತೆಗೆದುಕೊಂಡಿರತಕ್ಕ ನಿವೇಶನದಲ್ಲಿ ಕಛೇರಿ ಕಟ್ಟಡ, ನಾಟ್ಯದ ಒಂದು ರಂಗಮಂಟಪ, ಲೈಬ್ರರಿ ಹೀಗೆ ನಾನಾ ಕಾರ್ಯಗಳಿಗೆ ಗೋಸ್ಕರ ಒಂದು ನಕ್ಷೆ ಕೊಟ್ಟಾಗ ಆ ನಕ್ಷೆ ಈಗ ಇರುವಂಥ ಪ್ರಾರ್ಥನಾ ಮಂದಿರದ ಪಕ್ಕದಲ್ಲಿರುವುದರಿಂದ, ಬಳ್ಳಾರಿ ರಸ್ತೆಯಿಂದ ಆ ಗೋಪುರ ದೃಷ್ಟಿಗೆ ಅಡ್ಡ ಬರುತ್ತದೆ ಎಂದು ಸಾರ್ವಜನಿಕರು ದೂರುಕೊಟ್ಟರು. ಈ ಕಟ್ಟಡವನ್ನು ಉತ್ತರ ಭಾಗಕ್ಕೆ ಬದಲಾಯಿಸಿದ್ದರಿಂದ ಆ ಮಧ್ಯದಿಂದ ಮೇಲಿನ ಗೋಪುರ ಕಾಣಲಿಕ್ಕೆ ಅವಕಾಶ ಆಯಿತು. ಆ ನಕ್ಷೆ ಬದಲಾವಣೆ ಮಾಡಿ ಪ್ರಾಧಿಕಾರದವರು ಮಂಜೂರಾತಿ ಮಾಡಿದರು. ಆದು ಆದಮೇಲೆ ಕೆಲಸ ಪ್ರಾರಂಭವಾಯಿತು. ತದನಂತರ ಯಥಾಪ್ರಕಾರ ಮತ್ತೆ ಸಾರ್ವಜನಿಕರಿಂದ ಆ ಬಗ್ಗೆ ದೂರುಗಳು ಬಂದವು. ಈಗ ನಾವು ಹೋಗಿ ಸ್ಥಳ ಪರೀಕ್ಷೆ ಮಾಡಿ, ಆ ಪ್ರದೇಶದ ಮಹತ್ವ ಅರಿತುಕೊಂಡು, ಕೆಲಸವನ್ನು ಸ್ಥಗಿತ ಮಾಡಿದ್ದರಿಂದ, ಕೆಲಸ ನಿಂತು ಹೋಗಿದೆ. ಈ ವಿಚಾರದಲ್ಲಿ, ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಪ್ರಸ್ತಾಪ ಆಯಿತು, ಸಾರ್ವಜನಿಕರ ಗಮನಕ್ಕೂ ಬಂದಿದೆ. ಕೆಂಪೇಗೌಡರ ಸ್ಮಾರಕದ ಗುರುತುಗಳು ಬೆಂಗಳೂರು ನಾಲ್ಕು ಭಾಗಗಳಲ್ಲೂ ಉಳಿಯಬೇಕೆಂಬ ದೃಷ್ಟಿಯಿಂದ ಉದ್ಯಾನವನಗಳಾಗಿ ಪರಿವರ್ತನೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆ. ಈಗ ಅಲ್ಲಿರತಕ್ಕ ಪ್ರದೇಶವನ್ನೆಲ್ಲಾ ಬೆಂಗಳೂರು ನೀರು ಸರಬರಾಯಿ ಮಂಡಲಿಯವರಲ್ಲಿರತಕ್ಕ ಪ್ರದೇಶ, ಮಿಕ್ಕಿದ್ದು ಪ್ರಾಧಿಕಾರದ ವಶದಲ್ಲಿರತಕ್ಕ ಪ್ರದೇಶವನ್ನು ಉದ್ಯಾನವನವಾಗಿ ಪರಿವರ್ತನೆ ಮಾಡುತ್ತಿದ್ದೇವೆ. ಈಗಾಗಲೇ ಸಾರ್ವಜನಿಕರ ಅಭಿಪ್ರಾಯದ ಪ್ರಕಾರ ಕೆಲಸ ನಿಲ್ಲಿಸಿದೆ. ಕಾನೂನು ಪ್ರಕಾರ ಇರುವಂಥ ಪ್ರಾರ್ಥನಾ ಮಂದಿರದಲ್ಲಿ ಕಾರ್ಯ ಚಟುವಟಿಕೆಗಳು ನಡೆಯುತ್ತಿದೆ. ಹಿಂದೆ ಇದ್ದ ಭಾಗ ಅದನ್ನು ಬಿಟ್ಟು ಹೊಸದಾಗಿ ಆಗಿರತಕ್ಕದ್ದು, ಗೋಪುರ ಇರುವಂಥ ಪ್ರದೇಶಕ್ಕೆ ಯಾವುದು ಅಡ್ಡ ಬರುತ್ತದೆ, ಅದರ ಬಗ್ಗೆ ಪರಿಗಣನೆಗೆ ತೆಗೆದುಕೊಂಡು, ನಿಯಮಬದ್ಧವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಅಲ್ಲಿ ಕೆಲಸ ನಿಲ್ಲಿಸಿದ್ದೇವೆ.

ಶ್ರೀ ವೈ. ಕೆ. ರಾಮಯ್ಯ.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ಕ್ಲಾರಿಫಿಕೇಷನ್ ಕೇಳಬೇಕಾಗಿದೆ.

ಅಧ್ಯಕ್ಷರು.— ನಿಯಮ 334ರ ಪ್ರಕಾರ ಕ್ಲಾರಿಫಿಕೇಷನ್ ಕೇಳಲಿಕ್ಕೆ ಆಗುವುದಿಲ್ಲ.

ಶ್ರೀ ವೈ. ಕೆ. ರಾಮಯ್ಯ — ಅಲ್ಲಿ ಬಯಲು ವಲಯವಾಗಿ ಉಳಿಸಿಕೊಂಡಿದ್ದರೂ, ಅಲ್ಲಿ ಕಟ್ಟಡ ಕಟ್ಟಿದ್ದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ ಚಂದ್ರಶೇಖರ್.— ಈಗಾಗಲೇ ನಾವು ಒಂದು ವಿಧೇಯಕವನ್ನು ಪಾಸ್ ಮಾಡಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಪ್ರಾಧಿಕಾರದವರು ಕೊಟ್ಟಿರುತ್ತಾರೆ, ಅದನ್ನು ಅವರು ಬೇರೆಯದಕ್ಕೆ ಉಪಯೋಗಿಸಿದರೆ ಕಾನೂನು ಬಾಹಿರ ಎಂದು ಈ ಸಾರಿ ಮಾಡಿದ್ದೇವೆ. ಹಿಂದೆ ಆ ರೀತಿ ಇರಲಿಲ್ಲ.

8. ಗಮನ ಸೆಳೆಯುವ ಸೂಚನೆ

ವಿಷಯ : ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿಯ ಮಲ್ಲಿಪುರ ಗ್ರಾಮವನ್ನು ಸ್ಥಳಾಂತರಿಸಬೇಕೆಂದಿರುವ ವಿಚಾರದ ಬಗ್ಗೆ.

ಶ್ರೀ ಎಂ. ಮಹದೇವ್ — ಅಧ್ಯಕ್ಷರೆ, ಕಬಿನಿ ನಾಲೆಯಿಂದ (ಕವಲು) ಬಿಡುವ ನೀರಿನಿಂದಾಗಿ ಸಂಕಷ್ಟಕ್ಕೊಳಗಾಗಿರುವ ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿಯ ಮಲ್ಲಿಪುರ ಗ್ರಾಮವನ್ನು ಈ ಕೂಡಲೇ ಸ್ಥಳಾಂತರಿಸಬೇಕೆಂಬ ವಿಚಾರದ ಬಗ್ಗೆ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ನಂಜನಗೂಡು ತಾಲ್ಲೂಕು ಬಿಳಿಗೆರೆ ಹೋಬಳಿಯ, ಮಲ್ಲಿಪುರ ಗ್ರಾಮವು ಕಬಿನಿ ಬಲದಂಡೆ ಕಾಲುವೆಯ 30ನೆಯ ವಿತರಣಾ ಕಾಲುವೆಯ ಅಚ್ಚುಕಟ್ಟಿನಲ್ಲಿ ಬರುತ್ತದೆ.

ಗ್ರಾಮವು ಕೆಳಮಟ್ಟದಲ್ಲಿ ಇದ್ದು ಕಾಲುವೆಯ ನೀರು ಬತ್ತದ ಗದ್ದೆಗಳ ಮೂಲಕ ಗ್ರಾಮದೊಳಕ್ಕೆ ಬಸಿಯುತ್ತಿದೆ. ಗ್ರಾಮಸ್ಥರು ಈ ಬಗ್ಗೆ ಈಗಾಗಲೇ ಕಂದಾಯ ಮತ್ತು ನೀರಾವರಿ ಇಲಾಖೆಗಳಿಗೆ ಮನವಿ ಮಾಡಿರುತ್ತಾರೆ.

ನಿವಾರಣಾ ಕ್ರಮವಾಗಿ ಒಂದು ಬಸಿಯುವ ಕಾಲುವೆಯನ್ನು ಗ್ರಾಮದ ಸುತ್ತಲೂ ತೆಗೆಯಲು ಯೋಜಿಸಲಾಗಿತ್ತು. ಆದರೆ ಗ್ರಾಮಸ್ಥರು ಈ ಯೋಜನೆಗೆ ಒಪ್ಪಿರುವುದಿಲ್ಲ. ಈ ಬಸಿಯುವ ನಾಲೆ ಕೆಲಸದ ಸಮಯದಲ್ಲಿ ಬೇಡವೆಂದು ತಡೆ ಹಾಕಿರುತ್ತಾರೆ.

ದಿನಾಂಕ : 8-11-1983 ರಂದು ಶ್ರೀರಂಗ ತಾಸಕರಾದ ಶ್ರೀ ವಿ. ನಾಸುದೇವ ಆಚಾರ ಸಮ್ಮುಖದಲ್ಲಿ ಗ್ರಾಮಸ್ಥರ ಸಭೆಯನ್ನು ಕರೆದು, ಅವರಿಗೆ ಬಸಿಯುವ ಕಾಲುವೆಯ ಕಡ್ಡಾಯ ಆವಶ್ಯಕತೆಯನ್ನು ಸಂಜಾಗೂರಿನ ಕಪಿಲಾ ನಾಲಾ ಪರಿಶೀಲನಾ ವಿಭಾಗದ ಕಾರ್ಯಪಾಲಕ ಅಧಿಯಂತರವರು ತಿಳಿಸಿರುತ್ತಾರೆ. ಆದರೆ ಗ್ರಾಮಸ್ಥರು ಬಸಿಯುವ ಕಾಲುವೆಯ ಬದಲು ಗ್ರಾಮವನ್ನು ಸ್ಥಳಾಂತರಿಸಬೇಕೆಂದು ಕೋರಿರುತ್ತಾರೆ. ಹಾಗೂ ಪರ್ಯಾಯ ವ್ಯವಸ್ಥೆ ಬರುವ ನೀರಿನಿಂದ ತೊಂದರೆ ಆದಲ್ಲಿ ಆಗಲೇ ಜವಾಬ್ದಾರರೆಂದು ಬಿಟ್ಟಿ ಕೊಡಲಿರುತ್ತಾರೆ.

ಸರ್ಕಾರವು ತನ್ನ ಆದೇಶದ ಸಂಖ್ಯೆ : ಪಿ.ಡಬ್ಲ್ಯೂ.ಡಿ. 199: ಜಿ. ಹೆಚ್.ಆರ್. 81 : ದಿನಾಂಕ: 25-11-1983ರಲ್ಲಿ ನೀರಾವರಿ ಯೋಜನೆಗಳ ಆಚ್ಚುಕಟ್ಟಿನಲ್ಲಿ ಬರುವ ಶೀತ ಪೀಡಿತ ಗ್ರಾಮಗಳ ಸ್ಥಳಾಂತರಿಸುವ ಪರಿಶೀಲನೆಗಾಗಿ ಮತ್ತು ಅದರ ಅವಶ್ಯಕತೆಯನ್ನು ತಿಳಿಯುವುದಕ್ಕಾಗಿ ಕಾವೇರಿ ಕಣಿವೆ ಯೋಜನೆಯ ಪ್ರಾಧಿಕಾರದ ಆಡಳಿತಾಧಿಕಾರಿಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಸಮಿತಿಯ ವರದಿಯನ್ನು ಸ್ಥಳ ಪರೀಕ್ಷೆಯ ನಂತರ ಕಳುಹಿಸಲಾಗುವುದು.

ಅಧ್ಯಕ್ಷರೇ, ಈ ವಿಷಯದಲ್ಲಿ ಸ್ವಲ್ಪ ಆಸುಮತಿ ಕೇಳಬೇಕಾಗಿದೆ. ಇದು ರೊಟೀನ್ ಸ್ಟೇಟ್‌ಮೆಂಟ್ ಇದೆ. ಈ ಜಲಾಶಯಗಳ ಹಿಂಭಾಗದಲ್ಲಿ ಬರತಕ್ಕ ಆಚ್ಚುಕಟ್ಟು ಪ್ರದೇಶದಲ್ಲಿ ಹಳ್ಳಿಗಳಿಗೆ ಹಿಸು ತೇವಾಶ ಹೆಚ್ಚಾಗಿದ್ದು ಮನೆಗಳು ಬಿದ್ದು ಹೋಗುತ್ತವೆ ಅದನ್ನು ಸ್ಥಳಾಂತರ ಮಾಡಲಿಕ್ಕೆ ಸರ್ಕಾರದಲ್ಲಿ ಯಾವುದೇ ನೀತಿಯನ್ನು ಇಲ್ಲಿಯವರೆಗೆ ನಿರೂಪಣೆ ಮಾಡಿಲ್ಲ. ಈ ಬಗ್ಗೆ ಬಹಳ ದಿನಗಳಿಂದ ಸರ್ಕಾರದ ಮೇಲೆ ಒತ್ತಾಯ ತರಲಾಗಿದೆ. ಆ ಕಡೆ ಕುಳಿತಿದ್ದಾಗ ನಾನು ಸಹ ಒತ್ತಾಯ ಮಾಡಿದ್ದೇ ಆದರೆ ಅದು ಸಾಧ್ಯವಾಗಿಲ್ಲ. ಒಂದು ಪದ್ಧತಿ ಇದೆ, ಜಲಾಶಯದಲ್ಲಿ ಮುಳುಗಡೆ ಆಗತಕ್ಕಂಥ ಪ್ರದೇಶದ ರೈತರಿಗೆ ಕೆಲವು ಮಟ್ಟಿಗೆ ಪರಿಹಾರ ಕೊಡುತ್ತಾರೆ. ಕಮ್ಮಾಂಡ್ ಏರಿಯಾದಲ್ಲಿ, ಸ್ಥಳಾಂತರ ಮಾಡಬೇಕಾದಲ್ಲಿ ಅಷ್ಟು ಪರಿಹಾರ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ, ಮಾನ್ಯ ಸಹದೇವ್ ಅವರು ಅತ್ಯಮೂಲ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಬಂದ ಕರ್ತವ್ಯದ ಪ್ರಕಾರ ಈ ಊರಿನಲ್ಲಿ ಸುಮಾರು 30 ಪ ನೆಗಳು ಕಾಣದು ಬಿದ್ದಿವೆ ಎಂದು ಬರೆದಿದೆ. ದುರ್ದೈವ, ನಾವು ಇಲ್ಲಿಯವರೆಗೆ ನೀತಿ ನಿರೂಪಣೆ ಮಾಡಲಿಕ್ಕೆ ಆಗದೇ ಇರುವುದರಿಂದ, ಕಷ್ಟ ಇದೆ. ನಮ್ಮ ಅಧಿಕಾರಿಗಳು ಒಂದು ಮಾದರಿಯನ್ನು ಮಂಡನೆ ಮಾಡುತ್ತಾರೆ. ಕಮ್ಮಾಂಡ್ ಏರಿಯಾದಲ್ಲಿ ಬರತಕ್ಕ ಹಳ್ಳಿಗಳಿಗೆ ನೀರಿನ ಸೌಲಭ್ಯ ಸಿಕ್ಕುವುದರಿಂದ, ಅವರ ಆರ್ಥಿಕ ಶಕ್ತಿ ಹೆಚ್ಚಾಗಿರುತ್ತದೆ. ಆದ್ದರಿಂದ ಅವರೇ ಸ್ಥಳಾಂತರ ಮಾಡತಕ್ಕದ್ದು ಸೂಕ್ತ ಎನ್ನುವ ಮಾದರಿ ಇದೆ. ಆದ್ದರಿಂದ, ಇಲ್ಲಿಯವರೆಗೆ ಪಾಲಿಸಿ ಡಿಸಿಷನ್ ಮಾಡಲಿಕ್ಕೆ ಆಗಿಲ್ಲ. ಈಗ ನಿರ್ಣಯ ಮಾಡಿದ್ದೇವೆ. ಎಲ್ಲಾ ಯೋಜನೆಗಳ ಹಿಂಭಾಗದಲ್ಲಿ, ಆಚ್ಚುಕಟ್ಟು ಪ್ರದೇಶದಲ್ಲಿ ಬರತಕ್ಕ ಹಳ್ಳಿಗಳು ಏನು ಇವೆ ಅವುಗಳನ್ನು ಮೊದಲೇ ಸ್ಥಳಾಂತರ ಮಾಡಬೇಕೆಂಬ ಬಗ್ಗೆ, ಆಯಾಯ ಪ್ರಾಧಿಕಾರದ ಅಧ್ಯಕ್ಷರು ಯಾರು ಇದ್ದಾರೆ. ಕಾವೇರಿ ಜೋರ್ಮನ್‌ರ ಅಧ್ಯಕ್ಷತೆಯಲ್ಲಿ, ಜಾಯಿಂಟ್ ಡೈರೆಕ್ಟರ್ ಆಫ್ ಹೆಲ್ತ್ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು, ಚೀಫ್ ಇಂಜಿನಿಯರ್, ಇವರುಗಳನ್ನು ಒಳಗೊಂಡಂತೆ ಒಂದು ಸಮಿತಿ ಮಾಡಬೇಕು ಅವರು ಆ ಗ್ರಾಮವನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ಕೊಡತಕ್ಕ ವರದಿಯ ಆಧಾರದ ಮೇಲೆ ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ, ಸರ್ಕಾರ ಕ್ರಮ ತೆಗೆದುಕೊಳ್ಳತಕ್ಕ ನಿರ್ಣಯ ಮಾಡಿದ್ದೇವೆ .ಅದೇ ರೀತಿ, ಹೊತ್ತು ಮೈಸೂರು, ಕಾವೇರಿ ಕಾಡಾ ಅಧ್ಯಕ್ಷರು ಇದ್ದಾರೆ. ಆಡ್ಮಿನಿಸ್ಟ್ರೇಟರ್ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಸೂಚನೆ ಕೊಟ್ಟಿದ್ದೇವೆ. ಈ ಗ್ರಾಮದ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಕೊಡಲಿಕ್ಕೆ ತಿಳಿಸಿದ್ದೇವೆ. ಸ್ಥಳಾಂತರ ಮಾಡತಕ್ಕದ್ದು ಒಂದು ಭಾಗ ಅದರ ಸುತ್ತಾ ಪ್ರೊಟೆಕ್ಷನ್ ಸಿಸ್ಟಮ್ ಕ್ರಿಯೇಟ್ ಮಾಡಿ, ಅದನ್ನು ತಪ್ಪಿಸುವುದು ಒಂದು ಭಾಗ. ಈ ಎರಡು ವಿಚಾರಗಳ ಬಗ್ಗೆ ಪರಿಶೀಲಿಸಿ ವರದಿ ಕೊಡಬೇಕೆಂದು ಹೇಳಿದ್ದೇವೆ ಅದು ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ

ಶ್ರೀ ಎಂ. ಮಹದೇವ್ — ತಾವು ಕ್ರಮ ತೆಗೆದುಕೊಂಡಿರುವುದು ಬಹಳ ಸಂತೋಷದ ಸಂಗತಿ. ಆದರೆ ಅವರಿಗೆ ಅಲ್ಲಿ ಏನಾಗಿದೆ ಅಂದರೆ ಅವರು ವಾಸ ಮಾಡುತ್ತಿದ್ದ ಮನೆಯ ಗೋಡೆಗಳು ಬಿದ್ದು ಹೋಗಿದೆ. ತಾವು ಅವರಿಗೆ ಪುನರ್ವಸತಿ ಕಲ್ಪಿಸಿ ಕೊಡುವವರೆಗೂ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಈಗ ಅವರ ಮನೆಗಳು, ಅಥವಾ ಅವರ ಮನೆಯ ಗೋಡೆಗಳು ಏನು ಬಿದ್ದು ಹೋಗಿವೆ ಅವ್ಹು

ಗಳನ್ನು ರಿಪೇರಿ ಮಾಡಿಸಿಕೊಳ್ಳಲು ತಕ್ಷಣ ಸರ್ಕಾರದ ವತಿಯಿಂದ ಆರ್ಥಿಕ ಸಹಾಯವನ್ನು ಏನಾದರೂ ಮಾಡುತ್ತೀರಾ? ಮತ್ತು ಅವರು ಪುನರ್‌ವಸತಿಗಾಗಿ ಕೇಳಿರತಕ್ಕ 25 ಎಕರೆ ಜಮೀನು ಏನು ಹೇಳಿದ್ದಾರೆ ಅದನ್ನು ಮಂಜೂರು ಮಾಡಿಸಿಕೊಡುತ್ತೀರಾ? ಏಕೆಂದರೆ ಆ ಭಾಗದಲ್ಲಿ ವಾಸಮಾಡುತ್ತಿರುವ ಜನರು ಬಹಳ ಹಿಂದುಳಿದವರ್ಗದವರು ಆರ್ಥಿಕವಾಗಿ ಬಹಳ ತೊಂದರೆಪಡುತ್ತಿದ್ದಾರೆ ಅವರು ಬಹಳ ಬಡವರು. ಈಗಿನ ಪರಿಸ್ಥಿತಿಯಲ್ಲಿ ಅವರ ಹತ್ತಿರ ಇಪ್ಪತ್ತೈದು ರೂಪಾಯಿ ಎಂದರೂ ಸಿಕ್ಕುವುದಿಲ್ಲ. ಈಗ ಅವರು ರಾತ್ರಿ ಹೊತ್ತು ಮಲಗಲು ಸ್ಥಳವಿಲ್ಲ. ಆದ್ದರಿಂದ ದಯವಿಟ್ಟು ಅವರಿಗೆ ಈ ತಕ್ಷಣ ಸೂಕ್ತ ಪರಿಹಾರವನ್ನು ನೀಡಿ ಅವರು ಮನೆಯ ಗೋಡೆಗಳನ್ನು ರಿಪೇರಿ ಮಾಡಿಸಿಕೊಳ್ಳಲು ವ್ಯವಸ್ಥೆ ಮಾಡುವುದು ಮತ್ತು ಅವರು ಕೇಳಿರತಕ್ಕ 25 ಎಕರೆ ಜಮೀನು ಏನಿದೆ ಅದನ್ನು ಮಂಜೂರು ಮಾಡಿಕೊಡುವುದು ಈ ಬಗ್ಗೆ ತಮ್ಮ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೇ, ಈ ರೀತಿ ಬಡವರ ಮನೆಗಳು ಬಿದ್ದು ಹೋಗಿರುವುದು ಒಂದು ದುರ್ದೈವವೆಂದು ಹೇಳಬೇಕಾಗುತ್ತದೆ. ಇಂಥ ಘಟನೆ ನನ್ನ ಕ್ಷೇತ್ರದಲ್ಲೂ ಕೂಡ ನಡೆದಿದೆ. ರಾಜ್ಯದಲ್ಲಿ ಹೆಚ್ಚುವರಿ ಇರತಕ್ಕ ಜಮೀನನ್ನ ಜಮೀನು ಇಲ್ಲದವರಿಗೆ ಹಂಚಬೇಕೆಂದು ಹಿಂದಿನ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಅದರಂತೆ ಇವ್ವ ಜಮೀನನ್ನೆಲ್ಲಾ ಹಂಚಿದ್ದು ಆಗಿದೆ; ಆದರೆ ಈಗ ಅವರಿಗೆ ಭೂಮಿಯನ್ನು ಕೊಡಲು ಸಧ್ಯದಲ್ಲಿ ಸಾಧ್ಯವಾಗುತ್ತಿಲ್ಲ. ಆದರೂ ಈ ವಿಷಯವನ್ನು ನಾನು ತೀವ್ರವಾಗಿ ಪರಿಶೀಲಿಸುತ್ತೇನೆ. ಈಗ ಎಂಥ ಪರಿಸ್ಥಿತಿ ಬಂದಿದೆ ಎಂದರೆ ಸರ್ಕಾರದ ಬಳಿ ಜಮೀನು ಇಲ್ಲ, ವಾಸಗಿಯವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ಅಷ್ಟು ಸುಲಭದ ಕೆಲಸವಲ್ಲ. ಇದು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಚಾರ. ಅಲ್ಲಿನ ಜನರು ಏನು ಕಷ್ಟಪಡುತ್ತಿದ್ದಾರೆಂಬುದು ನನ್ನ ಗಮನಕ್ಕೂ ಬಂದಿದೆ. ಕೆಲವು ಕಡೆ ಮನೆಗಳಲ್ಲಿ ಕೂತು ಕೊಳ್ಳುವುದಕ್ಕೂ ಸಾಧವಾಗುತ್ತಿಲ್ಲ. ಮತ್ತೆ ಕೆಲವು ಮನೆಗಳಲ್ಲಿ ಕೆಳಗಡೆ ಹಲಗೆಗಳನ್ನು ಹಾಕಿಕೊಂಡು ಮಲಗುತ್ತಿದ್ದಾರೆ. ಮೇಲೆ ಹಗ್ಗಗಳನ್ನು ಕಟ್ಟಿ ಆದಕ್ಕೆ ತೊಟ್ಟಿಲುಗಳನ್ನು ಕಟ್ಟಿ ಆದರಲ್ಲಿ ಮಕ್ಕಳನ್ನು ಮಲಗಿಸುತ್ತಿದ್ದಾರೆ. ಈ ಒಂದು ವಿಚಾರವನ್ನು ನಾವು ಮಾನವೀಯತೆಯ ದೃಷ್ಟಿಯಿಂದ ಪರಿಶೀಲನೆ ಮಾಡಬೇಕಾಗುತ್ತದೆ. ಯಾರಿಗೆ ಮನೆಗಳು ಬಿದ್ದು ಹೋಗಿ ಇರುವುದಕ್ಕೆ ಸ್ಥಳ ಇಲ್ಲ ಅಂಥವರಿಗೆ ಬೇರೆಕಡೆ ಸರ್ಕಾರದ ವತಿಯಿಂದ ನಿವೇಶನಪನ್ನು ಕೊಡಬೇಕಾಗುತ್ತದೆ. ಪರಿಹಾರವನ್ನು ಕೊಡ ಬೇಕಾಗುತ್ತದೆ. ಈ ವಿಚಾರವನ್ನು ನಾವು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ. ಅಲ್ಲಿ ಈಗ ಮನೆಗಳು ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ನಾವು ಅವುಗಳಿಗೆ ಗೋಡೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಟ್ಟರೂ ಕೂಡ ಮತ್ತೆ ಆ ಗೋಡೆಗಳು ಬಿದ್ದು ಹೋಗುತ್ತವೆ. ಈಗ ಅವರಿಗೆ ಹಣವನ್ನು ಕೊಡುವ ಬದಲು ನಿಧಾನ ಮಾಡೋಣ ಎಂದರೆ ಅವರು ತುಂಬಾ ಕಷ್ಟದಲ್ಲಿದ್ದಾರೆ. ಇಲ್ಲಿ ತಮಗೆ ಒಂದು ಮಾತನ್ನು ಹೇಳಬೇಕಾಗಿದೆ. ನಾವು ಅವರಿಗೆ ಪರಿಹಾರವನ್ನು ಕೊಟ್ಟರೂ ಪೂರ್ಣ ಪ್ರಮಾಣದಲ್ಲಿ ಕೊಡುವುದಕ್ಕಾಗುವುದಿಲ್ಲ. ಆದರೂ ಇನ್ನು ಒಂದೆರಡು ವಾರದಲ್ಲಿ ಪರಿಹಾರವನ್ನು ಒದಗಿಸಿಕೊಡುತ್ತೇವೆ, ಮತ್ತು ಬರುವ ಜೂನ್ ತಿಂಗಳೊಳಗೆ ಅಂದರೆ ಬೇಸಿಗೆಯೊಳಗಾಗಿ ಅವರಿಗೆ ಬೇರೆ ಕಡೆ ಸ್ಥಳಾಂತರ ಮಾಡಲು ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಭರವಸೆ ಕೊಡುತ್ತೇವೆ.

ಶ್ರೀ ಕೆ. ಶಿವಮೂರ್ತಿ(ಭರಮಸಾಗರ).— ಮಾನ್ಯ ಅಧ್ಯಕ್ಷರೆ, ನಮ್ಮ ಹಿರೇಕೆರೂರಿನಲ್ಲಿ ನಡೆದಂಥ ಒಂದು ಕೊಲೆಯ ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ನೋಟೀಸನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಆದರೆ ಅದಕ್ಕೆ ಸರ್ಕಾರದಿಂದ ಉತ್ತರವೇ ಬರಲಿಲ್ಲ. ಅಲ್ಲಿ ಕೊಲೆಯಾಗಿ ಹೆಣ .....

ಅಧ್ಯಕ್ಷರು.— ನಿಮಗೆ ಈ ಹಿಂದೆ ಕೂಡ ಹೇಳಿದ್ದೇನೆ. ತಾವು ಪದೇ ಪದೇ ಈ ರೀತಿ ನಿಂತು ಮಾತನಾಡುತ್ತಾ ಹೋದರೆ ನಮ್ಮ ಹೆಣ ಕೂಡ ಬೀಳುತ್ತದೆ. ತಾವು ಪರಿಸ್ಥಿತಿಯನ್ನು ಅರ್ಥಮಾಡಿ ಕೊಳ್ಳಬೇಕು.

ಶ್ರೀ ಕೆ. ಶಿವಮೂರ್ತಿ.— ಸ್ವಾಮಿ, ನನಗೆ ತಾವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಇವತ್ತು ಮಾನ್ಯ ಸಚಿವರು (ರಾಜ್ಯ ಗೃಹ ಸಚಿವರು) ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು. ದಯವಿಟ್ಟು ಅವರಿಗೆ ಹೇಳಿ ನನಗೆ ಉತ್ತರವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಾದರೆ ಕೊಡಬಹುದು.

ಶ್ರೀ ರಮೇಶ ಜಿಗಜಿನಗಿ (ಗೃಹ ಖಾತೆ ರಾಜ್ಯ ಸಚಿವರು).— ಅಧ್ಯಕ್ಷರೆ; ನಿಯಮ 334ರ ಅನ್ವಯ ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಶಿವಮೂರ್ತಿ ಮತ್ತು ಇತರ ಸದಸ್ಯರು ಹಿರೇಕೆರೂರು ತಡಕನಹಳ್ಳಿ ಗ್ರಾಮದ ಕೆಂಚಪ್ಪ ಮೂಕಪ್ಪ ಎಂಬ ಹೆಸರಿನ ವಡ್ಡರ ಜನಾಂಗದ 18 ವರ್ಷದ ಹುಡುಗನ ಕೊಲೆ ಬಗ್ಗೆ ಎತ್ತಿದ ವಿಚಾರದ ಬಗ್ಗೆ ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಾಂಕ : 22-11-83 ರಂದು ಸಮಾರು ರಾತ್ರಿ 10 ಗಂಟೆಗೆ ರಾಣೆಬೆನ್ನೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ ತಡಕನಹಳ್ಳಿಯ ಮೂಕಪ್ಪ ಹನುಮಪ್ಪ ವಡ್ಡರ್ ಇವರು ತನ್ನ ಮಗನಾದ

ಕೆಂಚಪ್ಪ ಮೂಕಪ್ಪ ವಡ್ಡರ ವಯಸ್ಸು 18 ಇವರು ಬಸಪ್ಪ ಬಸಲಿಂಗಪ್ಪ ಕಡದಕಟ್ಟಿ ಇವರ ಮನೆಯಲ್ಲಿ ಕೂಲಿ ಆಳಾಗಿ ವರ್ಷಕ್ಕೆ ಮೂರು ನೂರು ರೂಪಾಯಿ ಸಂಬಳದ ಮೇಲೆ ಕೆಲಸ ಮಾಡುತ್ತಿದ್ದರೆಂದು ಮತ್ತು ಅವನನ್ನು ಬಸಪ್ಪ ಬಸಲಿಂಗಪ್ಪ ಕಡದಕಟ್ಟಿ, ಚನ್ನಬಸಪ್ಪ ಬಸಲಿಂಗಪ್ಪ ಕಡದಕಟ್ಟಿ, ಶಿವಪ್ಪ ಸಿದ್ದಪ್ಪ ಕಡದಕಟ್ಟಿ ಮತ್ತು ಹನುಮಂತಪ್ಪ ಬುಡಪ್ಪ ಹರಳಹಳ್ಳಿ ಇವರು ಕೂಡಿ 20-11-1983ರಂದು ಅವನನ್ನು ಕೊಲೆ ಮಾಡಿ ಶವವನ್ನು ಬಾವಿಯಲ್ಲಿ ಎಸೆದಿದ್ದಾರೆಂದು ದೂರು ಕೊಟ್ಟರು. ರಾಣೆಬೆನ್ನೂರು ಸರ್ಕಲ್ ಇನ್ಸ್‌ಪೆಕ್ಟರ್‌ರವರು ಈ ದೂರನ್ನು ಸಬ್‌ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ರಟ್ಟಿಹಳ್ಳಿ ಅವರಿಗೆ ಕಳುಹಿಸಿಕೊಟ್ಟು ಮೊಕದ್ದಮೆ ದಾಖಲು ಮಾಡಿಕೊಳ್ಳುವಂತೆ ಆದೇಶ ಇತ್ತರು. ಆದರಂತೆ ಈ ಪೋಲೀಸ್ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆಯ ಕಲಂ 302 ರೆಡ್ ವಿತ್ 34 ಅನ್ವಯ ಮೇಲಿನ 4 ಆರೋಪಿಗಳ ಮೇಲೆ ಮೊಕದ್ದಮೆ ನಂ. 25:83 ರಿಜಿಸ್ಟ್ರಾ ಮಾಡಿಕೊಂಡು ಸಂಬಂಧಪಟ್ಟವರಿಗೆ ಮೊದಲ ಮಾಹಿತಿ ವರದಿಯನ್ನು ಕಳುಹಿಸಿಕೊಟ್ಟರು.

23-11-83 ರಂದು ರಟ್ಟಿಹಳ್ಳಿ ಪೋಲೀಸ್ ಠಾಣೆಯ ಮುಖ್ಯ ಪೇದೆಯವರು ತಡಕನಹಳ್ಳಿಗೆ ಭೇಟಿ ಇತ್ತು ಪಂಚರನ್ನು ಕೂಡಿಸಿ ಬಾವಿಯಿಂದ ಶವವನ್ನು ಹೊರತೆಗೆದು ಶವ ಪಂಚನಾಮೆ ನಡೆಸಿದರು. ಶವ ಪಂಚನಾಮೆ ನಂತರ ಶವವನ್ನು ಮಸೂರಿನ ವೈದ್ಯಾಧಿಕಾರಿಗೆ ಮರಣೋತ್ತರ ಶವ ಪರೀಕ್ಷೆಗಾಗಿ ಕಳುಹಿಸಲಾಯಿತು. ಸದರಿ ಮುಖ್ಯ ಪೇದೆಯವರು 10 ಸಾಕ್ಷಿಗಳನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದಿದ್ದಾರೆ. ಅವರಲ್ಲಿ ಇಬ್ಬರು ಪ್ರತ್ಯಕ್ಷದರ್ಶಿಗಳಿದ್ದಾರೆಂದು ವರದಿಯಾಗಿದೆ. ಮರಣೋತ್ತರ ಶವ ಪರೀಕ್ಷೆಯಲ್ಲಿ ಮರಣವು ಎಡ ವೃಷಣದ ಮೇಲಿನ ಪೆಟ್ಟಿನಿಂದ ಉಂಟಾದ ಆಘಾತದಿಂದ ಆಗಿದೆ ಎಂದು ಕಂಡು ಬಂದಿದೆ. ಮೃತನ ದೇಹದ ಮೇಲೆ ಒಟ್ಟು 6 ಗಾಯಗಳು ಇದ್ದವು ಇವುಗಳಲ್ಲಿ ವೃಷಣದ ಮೇಲಿನ ಪೆಟ್ಟು ಹಾಗೂ ಎಡಗಣ್ಣಿನ ಹತ್ತಿರ ಉಂಟಾದ ಪೆಟ್ಟು ಮರಣದ ಪೂರ್ವದಲ್ಲಿ ಉಂಟಾದವುಗಳೆಂದು ವೈದ್ಯರ ಅಭಿಪ್ರಾಯವಿದೆ. ಈ ಪ್ರಕರಣದಲ್ಲಿಯ ಆರೋಪಿಗಳು ಧಾರವಾಡದ ನ್ಯಾಯಾಲಯಕ್ಕೆ ನಿರೀಕ್ಷಣ ಜಾಮೀನು ಕೋರಿ ಅರ್ಜಿ ಹಾಕಿದರು. ಆದರೆ ನ್ಯಾಯಾಲಯವು ಅವರ ಅರ್ಜಿಯನ್ನು ತಿರಸ್ಕರಿಸಿತು. ಆರೋಪಿಗಳು ತಲೆತಪ್ಪಿಸಿಕೊಂಡಿದ್ದಾರೆ ಇವರನ್ನು ಪತ್ತೆ ಹಚ್ಚುವುದಕ್ಕಾಗಿ ತೀವ್ರತರ ಪ್ರಯತ್ನಗಳನ್ನು ಪೋಲೀಸರು ಮಾಡುತ್ತಿದ್ದಾರೆ ಮತ್ತು ತನಿಖೆ ಮುಂದುವರಿಯುತ್ತಿದೆ.

ಶ್ರೀ ಕೆ. ಶಿವಮೂರ್ತಿ.— ಮಾನ್ಯ ಅಧ್ಯಕ್ಷರೆ, ಈ ಹೆಣವನ್ನು ರಟ್ಟಿಹಳ್ಳಿ ಸ್ಮಶಾನದಲ್ಲಿ ಹೂತು ಹೋಗಿದ್ದಾರೆ. ನಂತರ ಆ ಸಮಾಧಿಗೆ ಎಡೆಯನ್ನು ಹಾಕುವುದಕ್ಕೆ ಹೋಗಿ ನೋಡಿದಾಗ ಅಲ್ಲಿ ಹೆಣವನ್ನು ಹೊರಗೆ ತೆಗೆದಿದ್ದುದು ಕಂಡುಬಂತು. ಆ ಹೆಣವನ್ನು ಹೊರಕ್ಕೆ ತೆಗೆದು ಪೋಸ್ಟ್‌ಮಾರ್ಟಂ ಮಾಡಿಸುಟ್ಟುಹಾಕಿದ್ದಾರೆ. ಬಸಪ್ಪ ಎನ್ನುವವರು ಭೂಮಿಯ ಮಾಲೀಕರು. ನಾನು ಕೇಳುತ್ತಿರುವುದು ಏನೆಂದರೆ ಆ ಸ್ಮಶಾನದಲ್ಲಿ ಹೂತುಹಾಕಿದ್ದ ಹೆಣ ಎಲ್ಲಿ ಹೋಯಿತು ?

ಅಧ್ಯಕ್ಷರು.— ನೀವು ಪ್ರತಿಸಾರಿ ಹೀಗೆ ನಿಂತು ನಿಂತು ಕೇಳುತ್ತಿದ್ದರೆ ಇಲ್ಲಿ ನಮ್ಮ ಹೆಣ ಕೂಡ ಉರುಳುತ್ತದೆ.

ಶ್ರೀ ಕೆ. ಶಿವಮೂರ್ತಿ. —ಸ್ಮಶಾನದಲ್ಲಿ ಹೂತಿದ್ದ ಹೆಣವನ್ನು ಹೊರಕ್ಕೆ ತೆಗೆದು ಏತಕ್ಕೆ ಸುಟ್ಟರು? ಈ ಹೆಣವನ್ನು ಸುಟ್ಟ ಬಗ್ಗೆ ಪೋಲೀಸರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ಸಂಬಂಧಪಟ್ಟ ಭೂಮಾಲೀಕರು ಯಾರಿದ್ದಾರೆ ಅವರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ರಮೇಶ್ ಜಿಗಜಿನಗಿ — ಈ ಕೊಲೆ ಕೇಸ್‌ನಲ್ಲಿ ತನಿಖೆ ನಡೆಯುತ್ತಿದೆ. ಇದರಲ್ಲಿ ನಿಷ್ಪಕ್ಷಪಾತವಾಗಿ ತನಿಖೆಯನ್ನು ಮಾಡಿಸುತ್ತೇವೆಂದು ಭರವಸೆಯನ್ನು ಕೊಡುತ್ತೇನೆ. ಆದರೆ ಹೂತಿದ್ದ ಹೆಣವನ್ನು ಹೊರಕ್ಕೆ ತೆಗೆದ ಬಗ್ಗೆ ನನಗೆ ಯಾವ ವರದಿಯೂ ಇಲ್ಲ. ಒಟ್ಟಿನಲ್ಲಿ ಈ ಕೇಸ್‌ನ ಬಗ್ಗೆ ನಿಷ್ಪಕ್ಷಪಾತವಾದ ತನಿಖೆಯನ್ನು ಮಾಡಿಸುತ್ತೇನೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಎಸ್ ಸೂರ್ಯನಾರಾಯಣರಾವ್.— ಮಾನ್ಯ ಅಧ್ಯಕ್ಷರೆ, ನಾನು ನಿಯಮ 334ರ ಕೆಳಗೆ ಬೀದರ್ ಜಿಲ್ಲೆಯಲ್ಲಿರತಕ್ಕಂಥ ಖಿಂಡಸಾರಿ ಕಾರ್ಖಾನೆಯ ಬಗ್ಗೆ ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರು. ಆದರ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು —ತಮಗೂ ನಾನು ಹೇಳಬೇಕಾದ ಪ್ರಸಂಗ ಬಂದರೆ ಬಹಳ ಕಷ್ಟವಾಗುತ್ತದೆ. ಯಾವುದಕ್ಕೂ ಸ್ಪೆಸಿಫಿಕ್ ಆಗಿ ಸರ್ಕಾರದಿಂದ ಉತ್ತರ ಬರಬೇಕಾದರೆ ಅದಕ್ಕೂ ಒಂದು ನಿಯಮಗಳು ಇರುತ್ತವೆ. ತಾವು ಪ್ರಶ್ನೆ ಯನ್ನು ಕೇಳಿ 68ನೇ ನಿಯಮ, 58ನೇ ನಿಯಮ 334ನೇ ನಿಯಮವೆಂದು ತೋರಿಸಿದರೆ ಬಹಳ ಕಷ್ಟವಾಗುತ್ತದೆ

9. Legislative Business

Karnataka Land Reforms (Amendment) Bill 1984

Leave to Introduce

Sri V. L. Patil (Minister for Revenue).— Sir, I move